# ಗುಲಬರ್ಗಾ ವಿಶ್ವವಿದ್ಯಾಲಯ

ಜ್ಞಾನ ಗಂಗಾ, ಕಲಬುರಗಿ–585 106, ಕರ್ನಾಟಕ, ಭಾರತ

ದೂರವಾಣಿ ಸಂ.: 08472-263202 ಫ್ಯಾಕ್ಸ್: 08472-263206, ಇ–ಮೇಲ್: **registrargug@rediffmail.com**


ಸಂ. ಗುವಿಕ:ಆಡಳಿತ:ಅಉ:2022–23:3158

ದಿನಾಂಕ: ~~22~~ 23.11.2022

**2022–23ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರ ಅರ್ಜಿ ಆಹ್ವಾನ**

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿಯ ಮುಖ್ಯ ಆವರಣ ಹಾಗೂ ವಿಶ್ವವಿದ್ಯಾಲಯದ ಅಧೀನಕ್ಕೊಳಪಡುವ ಸ್ನಾತಕೋತ್ತರ ಕೇಂದ್ರಗಳಾದ ಬೀದರ ಮತ್ತು ಆಳಂದ ಮತ್ತು ಬಸವಕಲ್ಯಾಣ ಆವರಣದ ಶರಣ ಸಾಹಿತ್ಯ ಗ್ರಂಥಾಲಯ ಮತ್ತು ಸಂಪನ್ಮೂಲ ಕೇಂದ್ರದಲ್ಲಿರುವ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಅಗತ್ಯತೆಗನುಸಾರವಾಗಿ ಬೋಧನಾಕಾರ್ಯದ ನಿರ್ವಹಣೆಗಾಗಿ ಯು.ಜಿ.ಸಿ. ನಿಯಮಾನುಸಾರ ಬೋಧನಾ ಕಾರ್ಯಕ್ಕೆ ಅನುಗುಣವಾಗಿ ಪೂರ್ಣಕಾಲಿಕ/ ಅರೆಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಮುಖ್ಯ ಆವರಣ | |
|---|---|
| ಕ್ರ.ಸಂ. | ಸ್ನಾತಕೋತ್ತರ ವಿಭಾಗಗಳ ವಿವರ |
| 1. | ಅನ್ವಯಿಕ ವಿದ್ಯುದ್ವಿಜ್ಞಾನ |
| 2. | ಸಸ್ಯಶಾಸ್ತ್ರ |
| 3. | ಜೀವರಸಾಯನಶಾಸ್ತ್ರ |
| 4. | ಪ್ರಾಣಿಶಾಸ್ತ್ರ |
| 5. | ಗಣಿತ |
| 6. | ಪರಿಸರ ವಿಜ್ಞಾನ |
| 7. | ಜೈವಿಕತಂತ್ರಜ್ಞಾನ |
| 8. | ರಸಾಯನಶಾಸ್ತ್ರ<br>ಅ) ಫಿಜಿಕಲ್ ಕೆಮಿಸ್ಟ್ರಿ ಆ) ಇನ್ಆರ್ಗನಿಕ್ ಕೆಮಿಸ್ಟ್ರಿ<br>ಇ) ಆರ್ಗನೆಕ್ ಕೆಮಿಸ್ಟ್ರಿ ಈ) ಅನಾಲೆಟಿಕಲ್ ಕೆಮಿಸ್ಟ್ರಿ |
| 9. | ಮಟೀರಿಯಲ್ ಸೈನ್ಸ್ |
| 10. | ಸೂಕ್ಷ್ಮಜೀವಶಾಸ್ತ್ರ |
| 11. | ಗಣಕ ವಿಜ್ಞಾನ<br>ಅ) ಎಂ.ಸಿ.ಎ.<br>ಆ) ಎಂ.ಎಸ್ಸಿ. (ಗಣಕ ವಿಜ್ಞಾನ) |
| 12. | ಸಂಖ್ಯಾಶಾಸ್ತ್ರ |
| 13. | ಅರ್ಥಶಾಸ್ತ್ರ |
| 14. | ಇತಿಹಾಸ |
| 15. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ |
| 16. | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ |
| 17. | ಮಹಿಳಾ ಅಧ್ಯಯನ |
| 18. | ಡಾ. ಬಿ.ಆರ್. ಅಂಬೇಡ್ಕರ ಅಧ್ಯಯನ ಕೇಂದ್ರ<br>ಅ) ಪಿ.ಜಿ. ಡಿಪ್ಲೋಮಾ ಇನ್ ಅಂಬೇಡ್ಕರ್ ಸ್ಟಡೀಸ್ |
| 19. | ಸಮಾಜಕಾರ್ಯ |
| 20. | ಮನೋವಿಜ್ಞಾನ |
| 21. | ಕನ್ನಡ |
| 22. | ಪಾಲಿ ಮತ್ತು ಬೌದ್ಧ ಅಧ್ಯಯನ |
| 23. | ಇಂಗ್ಲೀಷ |
| 24. | ಮರಾಠಿ |

| | |
|---|---|
| 25. | ಸಂಗೀತ |
| 26. | ಹಿಂದಿ |
| 27. | ಸಂಸ್ಕೃತ |
| 28. | ಉರ್ದು ಮತ್ತು ಪರ್ಶಿಯನ್ |
| 29. | ದೃಶ್ಯಕಲಾ<br>ಅ) ಎಂ.ವಿ.ಎ. ಪೇಂಟಿಂಗ್<br>ಆ) ಎಂ.ವಿ.ಎ. ಸ್ಕಲ್ಪಚರ್ |
| 30. | ನಿರ್ವಹಣಾಶಾಸ್ತ್ರ |
| 31. | ವಾಣಿಜ್ಯ<br>ಅ) ಎಂ.ಕಾಂ. ಆ) ಎಂ.ಎಫ್.ಸಿ. |
| 32. | ದೈಹಿಕ ಶಿಕ್ಷಣ<br>ಅ) ಎಂ.ಪಿ.ಎಡ್. ಆ) ಬಿ.ಪಿ.ಎಡ್.<br>ಇ) ಪಿ.ಜಿ. ಡಿಪ್ಲೊಮಾ ಇನ್ ಯೋಗಾ |
| 33. | ಶಿಕ್ಷಣ |
| 34. | ಕಾನೂನು |
| | **ಸ್ನಾತಕೋತ್ತರ ಕೇಂದ್ರ, ಬೀದರ** |
| 1. | ಕನ್ನಡ |
| 2. | ಇಂಗ್ಲೀಷ |
| 3. | ಉರ್ದು ಮತ್ತು ಪರ್ಶಿಯನ್ |
| 4. | ರಸಾಯನಶಾಸ್ತ್ರ (ಇನ್ ಆರ್ಗನಿಕ್ ಕೆಮಿಸ್ಟ್ರಿ) |
| 5. | ಗಣಕ ವಿಜ್ಞಾನ |
| 6. | ಗಣಿತ |
| 7. | ಸಕ್ಕರೆ ತಂತ್ರಜ್ಞಾನ |
| 8. | ಅರ್ಥಶಾಸ್ತ್ರ |
| 9. | ರಾಜ್ಯಶಾಸ್ತ್ರ |
| 10. | ಸಮಾಜಶಾಸ್ತ್ರ |
| 11. | ಇತಿಹಾಸ |
| 12. | ಮಹಿಳಾ ಅಧ್ಯಯನ |
| 13. | ಸಮಾಜಕಾರ್ಯ |
| 14. | ವಾಣಿಜ್ಯ |
| 15. | ಕನ್ನಡ, ಬಸವಾದಿ ಶರಣ ಸಾಹಿತ್ಯ ಕೇಂದ್ರ, ಬಸವಕಲ್ಯಾಣ |
| | **ಸ್ನಾತಕೋತ್ತರ ಕೇಂದ್ರ, ಆಳಂದ** |
| 1. | ವಾಣಿಜ್ಯ |
| 2. | ಗಣಕ ವಿಜ್ಞಾನ |
| 3. | ಗಣಿತ |
| 4. | ಇಂಗ್ಲೀಷ |

**ಅಭ್ಯರ್ಥಿಗಳಿಗೆ ಸೂಚನೆ;**

1. ಅತಿಥಿ ಉಪನ್ಯಾಸಕರನ್ನು ಯು.ಜಿ.ಸಿ. ಹಾಗೂ ಕಾಲಕಾಲಕ್ಕೆ ಹೊರಡಿಸುವ ಸರಕಾರಿ ನಿಯಮಾವಳಿಯ ಪ್ರಕಾರ ನೇಮಕ ಮಾಡಲಾಗುವುದು.
2. ಈ ಹುದ್ದೆಗಳು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, 2022-23ನೇ ಶೈಕ್ಷಣಿಕ ಸಾಲಿಗೆ ಮಾತ್ರ ಸೀಮಿತವಾಗಿರುತ್ತವೆ ಹಾಗೂ ಯಾವುದೇ ಮಂಜೂರಾದ ಹುದ್ದೆಗಳಿಗೆ ಮೀರಿರುವುದಿಲ್ಲ ಮತ್ತು ಸೂಚಿಲಾದ ಹುದ್ದೆಗಳ ಸಂಖ್ಯೆಯು ತಾತ್ಕಾಲಿಕವಾಗಿದ್ದು, ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ನೇಮಿಸಿಕೊಳ್ಳಲಾಗುವುದು (Against the workload but not against the sanctioned post).

3. ಅಧಿಸೂಚನೆಯಲ್ಲಿ ಪ್ರಕಟಿಸಿದ ಹುದ್ದೆಗಳನ್ನು ಭರ್ತಿ ಮಾಡುವ ಅಥವಾ ಭರ್ತಿ ಮಾಡದೇ ಇರುವ ಅಧಿಕಾರವನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿದೆ.
4. ಆಯ್ಕೆಯಾದ ಅಭ್ಯರ್ಥಿಗಳ ಸೇವೆಯು ತೃಪ್ತಿಕರವಾಗಿರದಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಕೆಲಸದಿಂದ ತೆಗೆದುಹಾಕುವ ಅಧಿಕಾರ ವಿಶ್ವವಿದ್ಯಾಲಯ ಹೊಂದಿದೆ.
5. ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಅಭ್ಯರ್ಥಿಗಳು ನೇಮಕಾತಿಯೆಂದು ಭಾವಿಸತಕ್ಕದ್ದಲ್ಲ.
6. ಆಯ್ಕೆಯಾದ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಅಧೀನಕ್ಕೊಳಪಟ್ಟಿರುವ ಯಾವುದೇ ಸ್ನಾತಕೋತ್ತರ ಕೇಂದ್ರಗಳಲ್ಲಿ ಸೇವೆ ಸಲ್ಲಿಸಲು ಸಿದ್ಧವಿರಬೇಕು.
7. ನಿಗದಿತ ಅರ್ಜಿ ನಮೂನೆಗಳು, ವಿವಿಧ ವಿಭಾಗಗಳ ವಿವರ ಹಾಗೂ ಇನ್ನಿತರೆ ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಅಂತರ್ಜಾಲ www.gug.ac.in ನೋಡತಕ್ಕದ್ದು ಹಾಗೂ ಅರ್ಜಿಗಳನ್ನು ಡೌನ್‌ಲೋಡ್ ಮಾಡತಕ್ಕದ್ದು, ಭರ್ತಿ ಮಾಡಿದ ಅರ್ಜಿ ನಿಗದಿತ ಶುಲ್ಕ ಮತ್ತು ಲಗತ್ತುಗಳೊಂದಿಗೆ ಶೈಕ್ಷಣಿಕ ಅರ್ಹತೆ, ಅನುಭವದ ವಿವರ, ಜಾತಿ, ವರ್ಗ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿದ ಪ್ರತಿಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
8. ನಿಗದಿತ ಶುಲ್ಕವನ್ನು ವಿಶ್ವವಿದ್ಯಾಲಯದ ಅಂತರ್ಜಾಲ www.gug.ac.in ನಲ್ಲಿ ಲಭ್ಯವಿರುವ SB Collect ಆನ್‌ಲೈನ್ ಲಿಂಕ್ ಮುಖಾಂತರ ಪಾವತಿಸಿದ ಚಾಲನ್‌ನ ಪ್ರತಿಯೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸತಕ್ಕದ್ದು.
9. ಸಂದರ್ಶನದ ದಿನಾಂಕ ಮತ್ತು ಸಮಯವನ್ನು ಹಾಗೂ ಇದಕ್ಕೆ ಸಂಬಂಧಿಸಿದ ಇನ್ನಿತರೆ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ (www.gug.ac.in) ಪ್ರಕಟಿಸಲಾಗುವುದು. ಅಭ್ಯರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್ ಗಮನಿಸಲು ತಿಳಿಸಲಾಗಿದೆ. ಸಂದರ್ಶನಕ್ಕಾಗಿ ವಿಶ್ವವಿದ್ಯಾಲಯದಿಂದ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.
10. ಸಾಮಾನ್ಯ ಅಭ್ಯರ್ಥಿಗಳಿಗೆ ರೂ. 600/- ಹಾಗೂ ಪಜಾ/ಪಪಂ, ಪ್ರವರ್ಗ-1 ಅಭ್ಯರ್ಥಿಗಳಿಗೆ ರೂ. 300/- ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ. ಸದರಿ ಅಭ್ಯರ್ಥಿಗಳು ತಮ್ಮ ಪ್ರವರ್ಗವಾರು ಮೂಲ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಿದ್ದಲ್ಲಿ ಮಾತ್ರ ಮೀಸಲಾತಿಗೆ ಅರ್ಹರಿರುತ್ತಾರೆ. ಹಾಗೂ ಸಂದರ್ಶನದ ವೇಳೆ ಮೂಲ ಜಾತಿ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗುವುದು.
11. ಮೇಲ್ಕಂಡ ಎಲ್ಲಾ ದಾಖಲೆಗಳನ್ನು ದಿನಾಂಕ 30.11.2022ರ ಒಳಗಾಗಿ ವಿಶ್ವವಿದ್ಯಾಲಯದ ಮುಖ್ಯ ಆವರಣ, ಕಲಬುರಗಿಯಲ್ಲಿ ವಿಭಾಗದ ಮುಖ್ಯಸ್ಥರ ಕಚೇರಿಗೆ ಖುದ್ದಾಗಿ/ರಿಜಿಸ್ಟರ್ಡ್ ಅಂಚೆ ಮುಖಾಂತರ ಸಲ್ಲಿಸತಕ್ಕದ್ದು.
12. ಅಂಚೆ ಸೇವೆಯಲ್ಲಿ ವಿಳಂಬವಾದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರರಾಗುವುದಿಲ್ಲ.
13. ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
14. ಆಯ್ಕೆ ಪ್ರಕ್ರಿಯೆಯು ಪ್ರಸ್ತುತ ಜಾರಿಯಿರುವ ಸರಕಾರದ ನಿಯಮಾವಳಿಗಳನ್ವಯ ಅರ್ಹತೆ (ಮೆರಿಟ್) ಹಾಗೂ ಮೀಸಲಾತಿ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸಲಾಗುವುದು.
15. ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ವಿಭಾಗದ ಮುಖ್ಯಸ್ಥರು ನೀಡುವ ಕೆಲಸಗಳನ್ನು ನಿಷ್ಠೆಯಿಂದ ಪಾಲಿಸುವುದು.
16. ವಿಶ್ವವಿದ್ಯಾಲಯವು ನಡೆಸುವ ತಾತ್ಕಾಲಿಕ ಉಪನ್ಯಾಸಕರ ನೇಮಕದ ಸಂದರ್ಶನವು ವಿಶ್ವವಿದ್ಯಾಲಯದ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ಪ್ರತಿ ವಿಭಾಗಗಳ ಕಾರ್ಯಬಾಹುಳ್ಯದ ಅವಶ್ಯಕತೆಗೆ ಅನುಗುಣವಾಗಿ ನೇಮಕಾತಿ ಮಾಡಿಕೊಳ್ಳಲಾಗುವುದು.

22.11.2022

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
2. ಹಣಕಾಸು ಅಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
3. ವಿಶೇಷಾಧಿಕಾರಿಗಳು, ಬೀದರ ಹಾಗೂ ಆಳಂದ.
4. ಮುಖ್ಯಸ್ಥರು, ಗಣಕ ಕೇಂದ್ರ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ- ಈ ವಿಷಯವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
5. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಗು.ವಿ. ಕಲಬುರಗಿ.